ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 14.08.2024.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಡಿ.ಹೆಚ್.ಹೆಚ್. ವಕೀಲರಿಂದಃ

ನನ್ನ ತಂದೆ ಕಲಬುರಗಿಯಲ್ಲಿ ಮೃತ್ಯ ಪತ್ರವನ್ನು ನೋಂದಣಿ ಮಾಡುವ ಕಾಲಕ್ಕೆ ನಾನು ಹಾಜರಿದ್ದೆ. ಸದರಿ ಮೃತ್ಯ ಪತ್ರಕ್ಕೆ ಯಾರು-ಯಾರು ಸಾಕ್ಷಿದಾರರು ಇದ್ದರು ಎಂದು ನನಗೆ ಹೇಳಲು ಬರುತ್ತದೆ. ಅವೇರೆಂದೇರೆ, ರುಕ್ಮೂದ್ದಿನ್ ಹೈದರ್ ಅಲಿ ಶೇಖ್, ನಿಜಾಮುದ್ದಿನ್ ಹೈದರ್ ಅಲಿ ಶೇಖ್, ಹಾರುನ್ ಹೈದರ್ ಅಲಿ ಶೇಖ್, ಮೌಲಂಬಿ ಮಾದದ ಶೇಖ್, ಖಾಜಾಬೀ ಗೌಸ ಪಾಕ್ ಶೇಖ್ ರದ್ದರು. ಸದರಿಯವರು ಎಲ್ಲರು ಮೃತ್ಯ ಪತ್ರಕ್ಕೆ ಸಹಿ ಮಾಡಿರುತ್ತಾರೆ. ಸದರಿ ಮೃತ್ಯ ಪತ್ರಕ್ಕೆ ನನ್ನ ತಂದೆ ಮೊದಲು ಸಹಿ ಮಾಡಿರುತ್ತಾರೆ, ನಂತರ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಸದರಿ ಮೃತ್ಯ

ಪತ್ರದ ಅಂಶಗಳನ್ನು ಕಲಬುರಗಿಯಲ್ಲಿ ಗಣಕೀಕೃತ ಬೆರಳಚ್ಚು ಮಾಡಿಸಿರುತ್ತೇವೆ. ಸದರಿ ಮೃತ್ಯ ಪತ್ರವನ್ನು ಬಸೀರ ವಕೀಲರ ಹತ್ತಿರ ಮಾಡಿಸಿರುತ್ತೇವೆ, ಅವರ ತಿರಿಕೊಂಡಿರುತ್ತಾರೆ.

ನನ್ನ ತಂದೆ ಆಸ್ಪತ್ರೆಯಿಂದ ಬಿಡುಡಗೆ ಹೊಂದಿದ ನಂತರ ಎಷ್ಟು ದಿನಕ್ಕೆ ಮೃತ್ಯ ಪತ್ರ ಮಾಡಿರುತ್ತೀರಿ ಎಂದರೆ, ಸಾಕ್ಷಿ 1 ವರ್ಷದ ಒಳಗೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 2018-19ರಲ್ಲಿ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-5ರ ಮೃತ್ಯ ಪತ್ರವನ್ನು ಮಾಡುವ ಕಾಲಕ್ಕೆ ನನ್ನ ತಂದೆಗೆ ನಡೆಯಲು ಬರುತ್ತಿತ್ತು ಹಾಗೂ ಆರೋಗ್ಯವಾಗಿದ್ದರು. ನಾನು ಪ್ರಮಾಣ ಪತ್ರದಲ್ಲಿ ಹೇಳಿದಂತೆ ಜಮೀನು ಮಾರಾಟವಾಗಿದ್ದು, ಮಾರಾಟ ಮೊದಲು ಆಯಿತೋ ಅಥವಾ ನಿಪಿ-5ರ ಮೃತ್ಯ ಪತ್ರ ಮೊದಲು ಆಯಿತೋ ಎಂದರೆ, ಸಾಕ್ಷಿ ಮೃತ್ಯ ಪತ್ರ ಮೊದಲು ಆಯಿತು ಎಂದು ನುಡಿಯುತ್ತಾರೆ. ಸದರಿ ಮೃತ್ಯ ಪತ್ರಕ್ಕೆ 1ನೇ ಪ್ರತಿವಾದಿಯ ಸಹಿ ಪಡೆದಿಲ್ಲ. ನಾವು ಸಹಿ ಪಡೆದಿಲ್ಲ ಹಾಗೂ 1ನೇ ಪ್ರತಿವಾದಿಗೆ ಸದರಿ ಮೃತ್ಯ ಪತ್ರದ ಬಗ್ಗೆ ಗೊತ್ತಿಲ್ಲ ಎಂದರೆ, ಸಾಕ್ಷಿ ನಾವು ಕರೆದಿರುತತೇವೆ, ಅವರು ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ದೊಡ್ಡ ಅಣ್ಣ 1ನೇ ಪ್ರತಿವಾದಿಯನ್ನು ಮೃತ್ಯ ಪತ್ರ ಮಾಡುವ ಕಾಲಕ್ಕೆ ಕರೆದಿರುತ್ತಾನೆ, ಅದರೆ ನಾನು ಕರೆದಿಲ್ಲ.

ನನ್ನ ತಂದೆ ದಾವಾ ಜಮೀನುಗಳನ್ನು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ, ಆದರೆ 1970ರಲ್ಲಿ ಇರಬಹುದು. ಸದರಿ ಜಮೀನು ಎಷ್ಟಕ್ಕೆ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ನಿಪಿ-5ರ ವಿಲ್ ಮಾಡಿದ ಆಸ್ತಿಯನ್ನು ಕೂಡಾ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ನಿಪಿ-5ರ ವಿಲ್ ಡಿಡ್ ಆದ ನಂತರ ನನ್ನ ತಂದೆ 4 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಮಾರಾಟ ಮಾಡುವ ಕಾಲಕ್ಕೆ ನಾನು ಹಾಜರಿದ್ದೆ, ನನ್ನ ಎದುರಿಗೆ ಸದರಿ ಮಾರಾಟದ ವ್ಯವಹಾರ ಆಗಿರುತ್ತದೆ. ಸದರಿ ಮಾರಾಟದ ಹಣ ಎಕರೆಗೆ ರೂ.8,25,000/- ಅಂತೆ ಮಾರಾಟವಾಗಿರುತ್ತದೆ. ಸದರಿ ಮಾರಾಟಕ್ಕೆ ಸಂಬಂಧಪಟ್ಟಂತೆ ಕ್ರಯ ಪತ್ರ

ಆಗಿರುವುದಿಲ್ಲ. ಸದರಿ ಕ್ರಯ ಪತ್ರ ಬರಹ ರೂಪದಲ್ಲಿ ಇರುತ್ತದೆ. ಸದರಿ ಮಾರಾಟದ ಹಣವನ್ನು ಖರೀದಿದಾರರು 3 ಕಂತುಗಳಲ್ಲಿ ಕೊಟ್ಟಿರುತ್ತಾರೆ. ಎಲ್ಲ ಮಾರಾಟ ಹಣ ಮುಟ್ಟಿರುವುದಿಲ್ಲ, ಇನ್ನು ಸುಮಾರು ರೂ.15 ಲಕ್ಷ ಕೊಡುವ ಬಾಕಿ ಇರುತ್ತದೆ.

ಸದರಿ ಕ್ರಯ ಪತ್ರಕ್ಕೆ ನಾವೆಲ್ಲರು ಸಹಿ ಮಾಡಿರುತ್ತೇವೆ, ಆದರೆ 1ನೇ ಪ್ರತಿವಾದಿ ಸಹಿ ಮಾಡಿರುವುದಿಲ್ಲ. ಮೊದಲನೇ ಕಂತಿನಲ್ಲಿ ಖರೀದಿದಾರರು ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಕಂತಿನ ಹಣವನ್ನು ನಾನು ಏಣಿಸಿಲ್ಲ, ನನ್ನ ತಂದೆ ಏಣಿಸಿರುತ್ತಾರೆ. ಸದರಿ ಖರೀದಿದಾರ ಇನ್ನು ವರೆಗೂ ನೋಂದಣಿ ಕ್ರಯ ಪತ್ರ ಮಾಡಿ ಕೊಡಿ ಎಂದು ಕೇಳಿಲ್ಲ ಎಂದರೆ ಸರಿ. ನನ್ನ ತಂದೆ ಇನ್ನೊಂದು ಮೃತ್ಯ ಪತ್ರವನ್ನು ನಿಪಿ-6ರಂತೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-6ರಲ್ಲಿ 1ನೇ ಪ್ರತಿವಾದಿ ಸಹಿ ಇಲ್ಲ ಎಂದರೆ, ಸಾಕ್ಷಿ 1ನೇ ಪ್ರತಿವಾದಿ ಸಲುವಾಗಿ ಮಾಡಿದ್ದು, ಕಾರಣ ಅವರ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿ ನನ್ನ ತಂದೆ ವಿರುದ್ಧ ಆಳಂದ ಸಿವಿಲ್ ನ್ಯಾಯಾಲಯದಲ್ಲಿ ಜೀವನಾಂಶ ಕೇಸ್ ಹಾಕಿದ್ದರ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ತಂದೆಗೂ ಕೂಡಾ ಅದು ಗೊತ್ತಿಲ್ಲ. ನನ್ನ ತಂದೆ ಸದರಿ ಜೀವನಾಂಶ ಕೇಸಿನಲ್ಲಿ ಹಣ ಕೊಡುವುದು ಆಗದೇ ಇರುವ ಕಾರಣ, ರಾಜಿ ಸಂಧಾನ ಮಾಡಿ, ರಾಜಿಯಲ್ಲಿ 1ನೇ ಪ್ರತಿವಾದಿಗೆ ಪೂರ್ಣ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ, ಸಾಕ್ಷಿ ನನ್ನ ಸಮಕ್ಷಮ ಆಗಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ರಾಜಿ ಆಗುವುದು ನಮಗೆ ಕಂಡುಬಂದ ನಂತರ ನಾವು ನಮ್ಮ ತಂದೆಯನ್ನು ಕರೆದುಕೊಂಡು ಹೋಗಿ ನಿಪಿ-5ರಂತೆ ಮೃತ್ಯ ಪತ್ರ ಬರೆಯಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ಕಾಲಕ್ಕೆ ಸುಮಾರು ರೂ. 10-12 ಸಾವಿರ ಅಂತ್ಯ ಕ್ರಿಯೇ ಖರ್ಚು ಆಗಿರುತ್ತದೆ. ಸದರಿ ಹಣವನ್ನು ನಾವು ಬೇರೆಯವರಿಂದ ಸಾಲವಾಗಿ ಪಡೆದುಕೊಂಡಿಲ್ಲ, ನಮ್ಮ ಕೈಯಿಂದ ಖರ್ಚು ಮಾಡಿರುತ್ತೇವೆ.

1ನೇ ಪ್ರತಿವಾದಿಯ ವಿರುದ್ಧ ಯಾವಾಗಲೂ ಜಗಳವಾಡುತ್ತಾ ಬಂದಿದ್ದು, ಆ ಕಾರಣ ದಾವಾ ಸ್ವತ್ತು 1ನೇ ಪ್ರತಿವಾದಿಗೆ ಹೋಗಬಾರದು ದುರುದ್ದೇಶದಿಂದ, ನಿಪಿ-5ರಂತಹ ಮೃತ್ಯ ಪತ್ರವನ್ನು ಸೃಷ್ಠಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ನನ್ನ ತಂದೆ 1ನೇ ಪ್ರತಿವಾದಿಯ ಹೆಸರಿನಲ್ಲಿ ಆಳಂದ ಎಸ್.ಬಿ.ಐ. ಬ್ಯಾಂಕಿನಲ್ಲಿ ಹಣ, ಬಂಗಾರ, ಬೆಳ್ಳಿ ಇಟ್ಟಿರುತ್ತಾರೆ ಎಂದು ನಾವು ಹೇಳಿ ಬರೆಯಿಸಿದ್ದು, ಆ ಬಗ್ಗೆ ನಾನು ಚೌಕಾಶಿ ಮಾಡಿರುತ್ತೇನೆ, 1ನೇ ಪ್ರತಿವಾದಿ ಎಲ್ಲವನ್ನು ತೆಗೆದುಕೊಂಡಿರುತ್ತಾರೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಹಣ ಮತ್ತು ಬಂಗಾರ ಇಟ್ಟಿದ್ದರ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸದೇ ಇದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-6ರಲ್ಲಿ ಸಾಕ್ಷಿ ತಮ್ಮ ತಂದೆ ಸಹಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು. ನಿಪಿ-6ಕ್ಕೆ ಸಾಕ್ಷಿದಾರರು ಅಂತ ಶಾರು ರಸೂಲ್ ಮಹ್ಮದ್ ಹಾಗೂ ರಾಜಮಹ್ಮದ್ ರವರು ಸಹಿ ಮಾಡಿರುತ್ತಾರೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿಪಿ-6(ಬಿ)** ಮತ್ತು **ನಿಪಿ-6(ಸಿ)** ಎಂದು ಗುರುತಿಸಲಾಯಿತು. ನಿಪಿ-5ರ ದಾಖಲಾತಿ ಆದ 2 ದಿನಕ್ಕೆ ನಿಪಿ-6ರ ವಿಲ್ ಮಾಡಲಾಗಿರುತ್ತದೆ. ನಿಪಿ-5 ಮತ್ತು 6ರಲ್ಲಿ 1ನೇ ಪ್ರತಿವಾದಿಗೆ ಗೊತ್ತಿರದೇ ಇರುವ ಕಾರಣ, ಸದರಿ 2 ದಾಖಲೆಗಳು ಅವಳಿಗೆ ಬಂದನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6(ಎ) ನನ್ನ ತಂದೆಯ ಸಹಿ ಅಲ್ಲ ಎಂದರೆ ಸರಿಯಲ್ಲ. ವಿನಾಕಾರಣ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**